## ಪ್ಲಾಸ್ಟಿಕ್ ಬದಲಿ ಪರಿಹಾರಗಳು

- ಮರಳಿನಿಂದ ತಯಾರಾದ ಗಾಜಿನ ಉತ್ಪನ್ನಗಳು, ಜೊಂಡು, ಸೆಣಬಿನಿಂದ ತಯಾರಿಸಲಾದ ಕೈ ಚೀಲಗಳು, ಹಾಲಿನ ಪ್ರೊಟೀನ್‌ನಿಂದ ತಯಾರಾಗುವ ಮತ್ತು ಸುಲಭವಾಗಿ ಕೊಳೆಯುವ ಪ್ಲಾಸ್ಟಿಕ್, ಅಡಿಕೆ ಹಾಳೆಗಳಿಂದ ಮಾಡಿದ ಉತ್ಪನ್ನಗಳು, ಕೆರಾಟಿನ್‌ಯುಕ್ತ ಕೋಳಿಯ ಪುಕ್ಕಗಳಿಂದ ತಯಾರಾದ ನೀರು ನಿರೋಧಕ ಪ್ಲಾಸ್ಟಿಕ್, ಪ್ರಾಣಿಗಳ ಕೂದಲು, ತುಪ್ಪಳಗಳಿಂದ ತಯಾರಾದ ಉತ್ಪನ್ನಗಳು, ಲಿಗ್ನಿನ್‌ನಿಂದ ತಯಾರಾದ ವಸ್ತುಗಳು, ಪಾಲಿಯಸ್ಟರ್‌ಗಳಿಂದ ಕೂಡಿದ ಸಂಸ್ಕರಿಸಿದ ಪ್ಲಾಸ್ಟಿಕ್ ಬಳಸಿದರೆ ವಾತಾವರಣದ ಮೇಲಾಗುವ ಪರಿಸರ ಹಾನಿಯನ್ನು ತಕ್ಕಮಟ್ಟಿಗೆ ತಡೆಯಬಹುದು.
- ಪುನರ್ಬಳಕೆ ಮಾಡಲಾಗದ ಪ್ಲಾಸ್ಟಿಕ್ ಉತ್ಪಾದನೆಯನ್ನು ತತ್ ಕ್ಷಣದಿಂದ ನಿಲ್ಲಿಸಬೇಕು. ಪ್ಲಾಸ್ಟಿಕ್ ಉತ್ಪಾದಿಸಿದವರೇ ಅದರ ತ್ಯಾಜ್ಯವನ್ನು ನಿಭಾಯಿಸುವ ಎಕ್ಸ್‌ಟೆಂಡೆಡ್ ಪ್ರೊಡ್ಯೂಸರ್ ರೆಸ್ಪಾನ್ಸಿಬಿಲಿಟಿ (ಇಪಿಆರ್) ಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.
- ಅಂತರರಾಷ್ಟ್ರೀಯ ಒಪ್ಪಂದಗಳನ್ನು ಚಾಚೂ ತಪ್ಪದೇ ಪಾಲಿಸಬೇಕು. ವಿಶ್ವದೆಲ್ಲೆಡೆ ಏಕ ಬಳಕೆಯ ಪ್ಲಾಸ್ಟಿಕ್ ಸಂಪೂರ್ಣ ನಿಷೇಧ ಆಗಬೇಕು.
- ವಸ್ತುಗಳ ಪ್ಯಾಕಿಂಗ್ ಮತ್ತು ಸಾಗಣೆಗೆ ಪ್ಲಾಸ್ಟಿಕ್ ಬಳಸದಂತೆ ಅಥವಾ ಅತಿ ಕಡಿಮೆ ಬಳಸುವಂತೆ ನಿಗಾ ವಹಿಸಬೇಕು.
- ಅನಗತ್ಯ ಉತ್ಪನ್ನಗಳ ತಯಾರಿಕೆ ಮತ್ತು ಅತಿಯಾಗಿ ಪ್ಯಾಕ್ ಮಾಡುವುದನ್ನು ನಿಲ್ಲಿಸಬೇಕು.
- ಕಡಿಮೆ ಸಂಪನ್ಮೂಲ ಬಳಸುವ ವಸ್ತು ವಿನ್ಯಾಸವನ್ನು ರೂಪಿಸಬೇಕು.
- ನಿಷೇಧಿತ ಪ್ಲಾಸ್ಟಿಕ್ ಬಳಸುವ ಮತ್ತು ಕಸ ವಿಲೇವಾರಿಗೆ ಸಹಕರಿಸದವರ ಮೇಲೆ ದೊಡ್ಡ ಮೊತ್ತದ ದಂಡ ವಿಧಿಸಬೇಕು.
- ತ್ಯಾಜ್ಯ ಆಯುವ ವ್ಯವಸ್ಥೆಗೆ ಬಲ ತುಂಬಬೇಕು. ರೀಸೈಕಲಿಂಗ್ ಪ್ರಮಾಣವನ್ನು ಹೆಚ್ಚಿಸುವುದಲ್ಲದೆ ಎಲ್ಲೆಲ್ಲಿ ಸಾಧ್ಯವೊ ಅಲ್ಲಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಲ್ಲಿಸಬೇಕು.
- ಪ್ಲಾಸ್ಟಿಕ್ ಕೈ ಚೀಲಗಳ ಬದಲಾಗಿ ಅತ್ಯಂತ ಪರಿಸರಸ್ನೇಹಿಯಾಗಿರುವ ಸೆಣಬಿನ ಉತ್ಪನ್ನಗಳನ್ನು ಬಳಸಬೇಕು.
- ವಾಹನಗಳಿಗೆ ಬಳಸುವ ಟಯರ್‌ಗಳನ್ನು ರೀಸೈಕಲ್ ಮಾಡಬಹುದು ಇಲ್ಲವೇ ಇಂಧನವನ್ನಾಗಿ ಪರಿವರ್ತಿಸಬಹುದು. ಅಮೆರಿಕ ಒಂದರಲ್ಲೇ ವರ್ಷಕ್ಕೆ 29 ಕೋಟಿ ಟಯರ್‌ಗಳನ್ನು ಕಸವೆಂದು ಬಿಸಾಕಲಾಗುತ್ತದೆ. ಪೈರೋಲಿಸಿಸ್ ಕ್ರಿಯೆಯ ಮೂಲಕ ಟಯರ್‌ಗಳನ್ನು ಬಳಕೆ ಯೋಗ್ಯ ಇಂಧನವನ್ನಾಗಿ ಪರಿವರ್ತಿಸಬಹುದು. ತೈಲ ಮತ್ತು ಕಲ್ಲಿದ್ದಲಿನಿಂದ ಸಿಗುವ ಶಕ್ತಿಗಿಂತ 25 ಪಟ್ಟು ಹೆಚ್ಚು ಶಕ್ತಿಯು ಟಯರ್‌ಗಳನ್ನು ಪರಿವರ್ತಿಸಿದಾಗ ಸಿಗುತ್ತದೆ.




ಮೂವತ್ತು ವರ್ಷಗಳಿಂದ ಭಾರಿ ಪ್ರಮಾಣದ ಪ್ಲಾಸ್ಟಿಕ್ ಕಸವನ್ನು ಭೂಮಿಯೊಳಗೆ ತುಂಬಿದ್ದೇವೆ. ಕಸವನ್ನು ಸರಿಯಾಗಿ ವಿಲೇವಾರಿ ಮಾಡದಿರುವ ದೇಶಗಳ ಸೂಚ್ಯಂಕ ಪಟ್ಟಿಯಲ್ಲಿ ನಾವು ನಾಲ್ಕನೆಯ ಸ್ಥಾನದಲ್ಲಿದ್ದೇವೆ. ಕಳೆದ ವರ್ಷ ನಮ್ಮಲ್ಲಿ ಸರಿಯಾಗಿ ವಿಲೇವಾರಿಯಾಗದ ಪ್ಲಾಸ್ಟಿಕ್ ಕಸದ ಪ್ರಮಾಣ 70 ಲಕ್ಷ ಟನ್‌ಗಳಷ್ಟಿತ್ತು.

ಭಾರತೀಯ ಪ್ರಜೆಯೊಬ್ಬ ವಾರ್ಷಿಕ ಐದರಿಂದ ಆರು ಕಿಲೋ ಗ್ರಾಂ ಪ್ಲಾಸ್ಟಿಕ್ ಬಳಸುತ್ತಾನೆ. ವಿಶ್ವದ ಪ್ರಜೆಯ ಸರಾಸರಿ ಪ್ಲಾಸ್ಟಿಕ್ ಬಳಕೆ ಪ್ರಮಾಣವು 21 ಕಿಲೋ ಗ್ರಾಂ. ಐಸ್‌ಲ್ಯಾಂಡ್ ದೇಶದ ಪ್ರಜೆ ವರ್ಷಕ್ಕೆ ನೂರು ಕಿಲೋ ಹೆಚ್ಚು ಬಳಸುತ್ತಾನೆ. ಎರಡು ವರ್ಷಗಳ ಹಿಂದೆ ನೈರೋಬಿಯಾದಲ್ಲಿ ನಡೆದ ಯುನೈಟೆಡ್ ನೇಷನ್ಸ್ ಎನ್ವಿರಾನ್ಮೆಂಟ್ ಅಸೆಂಬ್ಲಿಯ 5ನೇ ಅಧಿವೇಶನದಲ್ಲಿ ರಾಸಾಯನಿಕಗಳ ಮತ್ತು ತ್ಯಾಜ್ಯ ನಿರ್ವಹಣೆಗಾಗಿ ವೈಜ್ಞಾನಿಕ ನೀತಿಯನ್ನು ರೂಪಿಸಲು 14 ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲಾಯಿತು. ಅದರಲ್ಲಿ ಪ್ಲಾಸ್ಟಿಕ್ ಮಾಲಿನ್ಯವನ್ನು ಸಂಪೂರ್ಣವಾಗಿ ತಡೆಯುವ ಅಂಶವೂ ಇತ್ತು ಮತ್ತು ಅದನ್ನು ವಿಶ್ವದ ಎಲ್ಲ ದೇಶಗಳು ಕಾನೂನಾತ್ಮಕವಾಗಿ ಪಾಲಿಸಲೇಬೇಕೆಂಬ ಸ್ಪಷ್ಟ ಉಲ್ಲೇಖವಿತ್ತು. ಸಭೆಯಲ್ಲಿ ಭಾಗವಹಿಸಿದ ಎಲ್ಲ ದೇಶಗಳು 2024ರ ವೇಳೆಗೆ ತಯಾರಾಗುವ 'ಪ್ಲಾಸ್ಟಿಕ್ ಮಾಲಿನ್ಯ ತಡೆ ನಿರ್ಣಯ'ಕ್ಕೆ ಬದ್ಧರಾಗುತ್ತೇವೆ ಎಂಬ ವಚನ ನೀಡಿದ್ದವು.

### ಸರ್ಕಾರದ ಪ್ರಯತ್ನಗಳೇನು?

ಹೆಚ್ಚುತ್ತಿರುವ ಪ್ಲಾಸ್ಟಿಕ್ ಮಾಲಿನ್ಯ ತಡೆಯಲು ಭಾರತ ಸರ್ಕಾರ ಹಲವು ನಿರ್ದಿಷ್ಟ ಕ್ರಮಗಳನ್ನು ಕೈಗೊಂಡಿದೆ. ಏಕ ಬಳಕೆಯ ಪ್ಲಾಸ್ಟಿಕ್ ನಿಷೇಧವನ್ನು ಮೂರು ವರ್ಷಗಳ ಹಿಂದೆಯೇ ಜಾರಿಗೆ ತರಲಾಗಿದೆ. ಪರಿಸರ ಮತ್ತು ಅರಣ್ಯ ಇಲಾಖೆ ರೂಪಿಸಿರುವ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಕಾಯಿದೆ 2018ರ ಪ್ರಕಾರ ರೀಸೈಕಲ್ ಮಾಡಲಾಗದ ಶಕ್ತಿ ಉತ್ಪಾದನೆಗೆ ನೆರವಾಗದ ಹಾಗೂ ಸಾವಯವ ವಸ್ತುವಾಗಿ ಕೊಳೆಯದ ರೂಪಾಂತರಗೊಳ್ಳದ ಹಲವು ಪದರದ ಪ್ಲಾಸ್ಟಿಕ್ ಅನ್ನು ಹಂತ ಹಂತವಾಗಿ ನಿರ್ಮೂಲನೆ ಮಾಡಬೇಕು ಮತ್ತು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳ ಸಹಭಾಗಿತ್ವದಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಕಡಿಮೆ ಮಾಡುವುದರ ಜೊತೆ ನಿಷೇಧಿಸಲಾದ ಪ್ಲಾಸ್ಟಿಕ್ ಉತ್ಪನ್ನಗಳ ಮಾರಾಟವನ್ನು ಸಂಪೂರ್ಣ ತಡೆಯಬೇಕು ಎಂದು ತನ್ನ ಆದೇಶದಲ್ಲಿ ಹೇಳಿದೆ. ಇನ್ನು ಐದು ವರ್ಷಗಳಲ್ಲಿ ಪ್ಲಾಸ್ಟಿಕ್ ಮಾಲಿನ್ಯವನ್ನು ಸಂಪೂರ್ಣ ತಡೆಯಲು 1.5 ಬಿಲಿಯನ್ ಡಾಲರ್ ಮೊತ್ತದ ಬೃಹತ್ ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಕೊನೆಯ ಮಾತು:

ಕಸ ನಿರ್ವಹಣೆಗೆ ಮಾದರಿ ಎನಿಸಿರುವ ನಗರಗಳಷ್ಟೇ ಅಲ್ಲ, ನಮ್ಮ ರಾಜ್ಯದ ಅರಂತೋಡು, ಐರ, ತಮಿಳುನಾಡಿನ ತಿರುಕಾಲುಕುಂದ್ರಂ, ಉತ್ತರಾಖಂಡದ ಸುಂದರ್ ಖಲ್, ಮೇಘಾಲಯದ ಮಾವ್ಲಿನಾಂಗ್ (ಏಷ್ಯಾದ ಅತ್ಯಂತ ಶುದ್ಧ ಊರು) ಗ್ರಾಮ ಪಂಚಾಯಿತಿಗಳು ಕಸ ನಿರ್ವಹಣೆಯ ವಿಷಯದಲ್ಲಿ ಇಡೀ ವಿಶ್ವಕ್ಕೆ ಮಾದರಿ ಎನಿಸಿವೆ. ಶಾಲಾ ಕಾಲೇಜಿನ ವಿದ್ಯಾರ್ಥಿಗಳು, ಗೃಹಿಣಿಯರು, ಸ್ವತಂತ್ರ ಚಿಂತಕರು ವಿನೂತನ ರೀತಿಯಲ್ಲಿ ಯೋಚಿಸಿ ಬೇಕಾಬಿಟ್ಟಿ ಬಿಸಾಡಿದ ಕಸದಿಂದ ಬಳಕೆ ಯೋಗ್ಯ ಉತ್ಪನ್ನಗಳನ್ನು ತಯಾರಿಸಿದ್ದಾರೆ.

ತ್ಯಾಜ್ಯ ನಿಯಂತ್ರಣ ಮತ್ತು ನಿರ್ವಹಣೆ ಕೇವಲ ಸರ್ಕಾರಗಳಿಂದ ಮಾತ್ರ ಸಾಧ್ಯವಿಲ್ಲ. ಜನರೂ ಭಾಗಿಯಾಗಬೇಕು ಮತ್ತು ಸಹಕರಿಸಬೇಕು.

ಪ್ರತಿಕ್ರಿಯಿಸಿ: feedback@sudha.co.in